## ಜೆಎಸ್‌ಎಸ್ ಮಹಾವಿದ್ಯಾಪೀಠ
## ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನ ವಾರಿಧಿ–3

### ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮ

**21 ಡಿಸೆಂಬರ್ 2020 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಉಪನ್ಯಾಸ

**ವಿದುಷಿ ಕೆ. ವೃಂದಾ ಆಚಾರ್ಯ**

ಖ್ಯಾತ ಸಂಗೀತ ಕಲಾವಿದರು

**ವಿಷಯ: ಭಾರತೀಯ ಸಂಗೀತದ ವಿಶೇಷತೆ**

**ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಸರ್ವರಿಗೂ ಹಾರ್ದಿಕ ಸ್ವಾಗತ**

LIVE STREAMING

YouTube http://Youtube.com/c/JSSMahavidyapeethaonline

https://www.facebook.com/JSSMVP http://jssonline.org

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಆನ್‌ಲೈನ್ (ವರ್ಚುವಲ್) ಮೂಲಕ ವಿಶೇಷ ಉಪನ್ಯಾಸ ಮಾಲೆಯ ಕಾರ್ಯಕ್ರಮಗಳನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಹಮ್ಮಿಕೊಳ್ಳಲಾಗಿದೆ. ಕಲೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನ, ಧರ್ಮ, ಅಧ್ಯಾತ್ಮ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಿದೆ.

**ವಿದುಷಿ ಕೆ. ವೃಂದಾ ಆಚಾರ್ಯರವರು** ಕರ್ನಾಟಕ ಸಂಗೀತ ಕ್ಷೇತ್ರದ ಪ್ರತಿಭಾವಂತ ಗಾಯಕರು. ವಿದುಷಿ ಶೈಲಾ ಸುಬ್ರಹ್ಮಣ್ಯಂರವರ ಬಳಿ ಸಂಗೀತದ ಆರಂಭಿಕ ಶಿಕ್ಷಣವನ್ನು, ವಿದುಷಿ ನೀಲಾ ರಾಂಗೋಪಾಲ್‌ರವರ ಬಳಿ ಉನ್ನತ ಶಿಕ್ಷಣವನ್ನು, ಜೊತೆಗೆ ಅವರ ಪತಿ ಮೃದಂಗ ವಿದ್ವಾನ್ ಅರ್ಜುನ್‌ಕುಮಾರ್‌ರವರ ಬಳಿ ಮಾರ್ಗದರ್ಶನವನ್ನು ಪಡೆದಿರುತ್ತಾರೆ. ಎಂ.ಕಾಂ ಪದವಿಯನ್ನು ಪ್ರಥಮ ಸ್ಥಾನ ಮತ್ತು ಐದು ಚಿನ್ನದ ಪದಕದೊಂದಿಗೆ ಪಡೆದು, ಹಲವು ವರ್ಷಗಳ ಕಾಲ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಅನಂತರ ಸಂಗೀತಕ್ಕಾಗಿ ತಮ್ಮ ಜೀವನವನ್ನು ಮೀಸಲಾಗಿರಿಸಿದ್ದಾರೆ. ಭಾರತೀಯ ಸಂಸ್ಕೃತಿಯ ಬಗ್ಗೆ ಉತ್ಕಟವಾದ ನಿಷ್ಠೆ ಹಾಗೂ ಸಂಸ್ಕೃತ ಸಾಹಿತ್ಯದ ಬಗ್ಗೆ ಅಪಾರವಾದ ಒಲವು ಹೊಂದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಭಾರತೀಯ ಸಂಗೀತ, ಸಂಸ್ಕೃತಿ, ತತ್ತ್ವಶಾಸ್ತ್ರಗಳ ಕುರಿತಾದ ಇವರ ವಿದ್ವತ್ಪೂರ್ಣ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

'ಅನನ್ಯ ಯುವ ಪುರಸ್ಕಾರ', 'ಆರ್ಯಭಟ ಪ್ರಶಸ್ತಿ', 'ಪ್ರತಿಭಾ ಪುರಸ್ಕಾರ', 'ಉತ್ತಮ ಗಾಯಕಿ', 'ಶ್ರೀಮತಿ ಡಿ.ಎನ್. ಪಾರ್ವತಮ್ಮ ಮೆಮೋರಿಯಲ್ ಪ್ರಶಸ್ತಿ' ಮುಂತಾದ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ. ಇದಲ್ಲದೆ ಸಂಸ್ಕೃತ, ಕನ್ನಡ ವಿದ್ವತ್ ಪರೀಕ್ಷೆಯಲ್ಲಿ ಎರಡನೆಯ ಸ್ಥಾನ, 'ರಾಗ–ತಾನ–ಪಲ್ಲವಿ' ಗಾಯನಕ್ಕೆ ವಿಶೇಷ ಬಹುಮಾನ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಫೆಲೋಶಿಪ್‌ಗಳನ್ನು ಕೂಡ ಪಡೆದಿದ್ದಾರೆ.

ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿ, ಮುಂಬೈನ ಷಣ್ಮುಖಾನಂದ ಸಭಾ, ಬೆಂಗಳೂರು ಗಾಯನ ಸಮಾಜ, ಮೈಸೂರು ದಸರಾ ಉತ್ಸವ ಮುಂತಾದ ದೇಶ ವಿದೇಶದ ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ಕಛೇರಿಗಳನ್ನು ನೀಡಿದ್ದಾರೆ. ವಿಷಯಾಧಾರಿತ ಕಾರ್ಯಕ್ರಮಗಳು, ವಿಶೇಷ ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳಿಂದಲೂ ಜನಪ್ರಿಯರಾಗಿದ್ದಾರೆ. ಶಾಸ್ತ್ರೀಯ ಮತ್ತು ಭಕ್ತಿ ಸಂಗೀತಗಳಲ್ಲಿ ಆಕಾಶವಾಣಿಯ ಕಲಾವಿದರಾಗಿ ಎಲ್ಲ ಪ್ರಮುಖ ವಾಹಿನಿಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

# ಜ್ಞಾನ ವಾರಿಧಿ–4

## 28 ಡಿಸೆಂಬರ್ 2020

ಉಪನ್ಯಾಸ

**ನಿ.ಪ್ರ.ಸ್ವ. ಶ್ರೀ ಪ್ರಭು ಚನ್ನಬಸವ ಸ್ವಾಮಿಗಳು**

ಶ್ರೀ ಮೋಟಗಿ ಮಠ, ಅಥಣಿ

**ವಿಷಯ: ಜೀವನ ಮೌಲ್ಯಗಳು**